ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಬರುತ್ತಿಲ್ಲ. 50–60 ಪರ್ಸೆಂಟ್ ಪ್ರಶ್ನೆಗಳಿಗೆ ಮಾತ್ರ ಉತ್ತರ ಬರುತ್ತಿದೆ.

ಅಧ್ಯಕ್ಷರು: ಎಷ್ಟು ಉತ್ತರ ಬಂದಿಲ್ಲ ಎಂಬ ಬಗ್ಗೆ ಈ ಅಧಿವೇಶನದಲ್ಲಿಯೇ ಕೊನೆಯಲ್ಲಿ ಕೊಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ: ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಒದಗಿಸುವ ಉತ್ತರಗಳ ಪ್ರತಿ ಕೂಡ ನಮಗೆ ಲಭ್ಯವಾಗಿಲ್ಲ.

ಅಧ್ಯಕ್ಷರು: ಆಯಿತು ಪ್ರತಿಯನ್ನು ಕೊಡಿಸುತ್ತೇನೆ. ತಾವು ಕುಳಿತುಕೊಳ್ಳಿ. ವೈಜನಾಥ್ ಪಾಟೀಲ್‌ರವರೆ ತಾವು ಮಾತನಾಡಿ

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ):– ಮಾನ್ಯ ಅಧ್ಯಕ್ಷರೆ, ಕಳೆದ ಅನೇಕ ವರ್ಷಗಳಿಂದ ನಮ್ಮ ಸಂವಿಧಾನಕ್ಕೆ ತಿದ್ದುಪಡಿ ಮಾಡಿ ಕರ್ನಾಟಕವನ್ನು 371ನೇ ಅನುಚ್ಛೇದದಲ್ಲಿ ಸೇರಿಸಬೇಕೆಂದು ಪ್ರಯತ್ನ ನಡೆಯುತ್ತಲೇ ಇದೆ. ಚಳವಳಿಗಳು ನಡೆಯುತ್ತಿದೆ. ಹಿಂದಿನ ಸರ್ಕಾರದಲ್ಲಿ ಜೆ.ಎಚ್. ಪಟೇಲ್ ಮುಖ್ಯಮಂತ್ರಿಗಳಾಗಿದ್ದಾಗಿನಿಂದಲೂ ಈ ಬಗ್ಗೆ ಪತ್ರ ವ್ಯವಹಾರ ನಡೆಯುತ್ತಿದೆ. ಹಿಂದೆ. ಎಸ್.ಎಂ. ಕೃಷ್ಣಾ ನೇತೃತ್ವದಲ್ಲಿ ದೆಹಲಿಗೆ ಡೆಲಿಗೇಶನ್ ಕೂಡ ಹೋಗಲಾಗಿತ್ತು. ನಮ್ಮ ಈಗಿನ ಮುಖ್ಯಮಂತ್ರಿ ಧರ್ಮಸಿಂಗ್‌ರವರ ನೇತೃತ್ವದಲ್ಲಿಯೂ ಕೂಡ ಕೇಂದ್ರ ಸರ್ಕಾರಕ್ಕೆ ಡೆಲಿಗೇಶನ್ ಹೋದರು. ಆಶ್ವಾಸನೆಯನ್ನೂ ಕೂಡ ಕೊಟ್ಟರು. ಚುನಾವಣೆಯಲ್ಲಿ ಕೂಡ ಆಶ್ವಾಸನೆಯನ್ನು ಕೊಟ್ಟಿದ್ದರು. ಈ ಬಾರಿ ಕೇಂದ್ರ ಸರ್ಕಾರಕ್ಕೆ ಡೆಲಿಗೇಶನ್ ಹೋಗಿದ್ದಾಗ ಶಿವರಾಜ್ ಪಾಟೀಲರವರನ್ನೂ ಭೇಟಿ ಮಾಡಲಾಗಿತ್ತು. ಪ್ರಧಾನ ಮಂತ್ರಿಗಳನ್ನು ಕೂಡಾ ಭೇಟಿ ಮಾಡಲಾಯಿತು. ಹೋಂ ಮಿನಿಸ್ಟರ್‌ರವರನ್ನು ಅನೇಕ ಶಾಸಕರುಗಳೂ ಕೂಡ ಭೇಟಿ ಮಾಡಿದಾಗ ಅವರೂ ಕೂಡಾ ಆಶ್ವಾಸನೆಯನ್ನು ಈ ಬಗ್ಗೆ ಕೊಟ್ಟಿದ್ದರು. ಆದರೆ ಇವೊತ್ತಿನ ದಿವಸ ಏನಾಗಿದೆ ಎಂದರೆ ಕೇಂದ್ರ ಸರ್ಕಾರದಿಂದ ಪತ್ರ ರಾಜ್ಯ ಸರ್ಕಾರಕ್ಕೆ ಬಂದಿದೆ. ಅದರಲ್ಲಿ ಇದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದಿದ್ದಾರೆ. ಆದರೆ ನಮ್ಮ ಸಿ.ಎಂ. ಆಗುವುದಿಲ್ಲ ಎಂದು ಹೇಳಿಲ್ಲ. ಮತ್ತೆ ಪ್ರಯತ್ನ ಮಾಡುತ್ತೇವೆ ಎಂದಿದ್ದಾರೆ. 371ನೇ ಅನುಚ್ಛೇದದಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ಹಾರಿಕೆಯ ಉತ್ತರಗಳನ್ನು ಕೊಡುತ್ತಿದ್ದಾರೆ. ಇವೊತ್ತು ನಮ್ಮ ಸರ್ಕಾರದಲ್ಲಿ ಸಿ.ಎಂ. ಅವರು ಇದರ ಬಗ್ಗೆ ಚರ್ಚೆಗೆ ನಮಗೆ ಬಿಟ್ಟಿದ್ದಾರೆ. ಏಕೆಂದರೆ ಹೈದ್ರಾಬಾದ್–ಕರ್ನಾಟಕ ಹಿಂದುಳಿದ ಪ್ರದೇಶ. ಮಹಾರಾಷ್ಟ್ರದಲ್ಲಿ ಮರಾಠವಾಡ ಸಲುವಾಗಿ 371ಕ್ಕೆ ಸೇರಿಸಿದರು. ಅದೇ

ರೀತಿ ತೆಲಂಗಾಣ ಸಲುವಾಗಿ ಅಂಧ್ರ ಪ್ರದೇಶದಲ್ಲಿ 371ಕ್ಕೆ ಸೇರಿಸಿದರು. ಆದರೆ ಅದೇ ಪಕ್ಕದ ಭಾಗದಲ್ಲಿ ಬರುವ ಹೈದ್ರಾಬಾದ್ ಕರ್ನಾಟಕ ಜಿಲ್ಲೆಗಳ ಸಲುವಾಗಿ ಕರ್ನಾಟಕವನ್ನು 371ರ ಪರಿಚ್ಛೇದದಲ್ಲಿ ಸೇರಿಬೇಕಾಗಿತ್ತು. ಆದರೆ ಸೇರಿಸಿಲ್ಲ ಬಹುಶಃ ಹಿಂದಿನವರು ಕೇಳುವುದಿಲ್ಲ. ಆದರೆ ಇವೊತ್ತು ನಮ್ಮ ಮೇಲೆ ಏನು ಪರಿಣಾಮವಾಗುತ್ತಿದೆ ಎಂದರೆ, ಸೆಲೆಕ್ಷನ್ ಮೇಲಾಗಲಿ, ಪ್ರೊಫೆಷನಲ್ ಕೋರ್ಸ್‌ಗಳಿಗೆ ಅಡ್ಮಿಶನ್ಸ್‌ನಲ್ಲಾಗಲೀ, ಮತ್ತು ಬೇರೆ ಯಾವುದೇ ಡೆವಲಪ್‌ಮೆಂಟ್‌ಗಳಲ್ಲಾಗಲೀ, ಇವೊತ್ತು ಸೆಲೆಕ್ಷನ್‌ನ್ನು ನಾವು ನೋಡುತ್ತಿದ್ದೇವೆ. ಇತ್ತೀಚೆಗೆ 1999ರಲ್ಲಿ ಹೈಕೋರ್ಟ್ ಜಡ್ಜ್‌ಮೆಂಟ್ ಏನು ಬಂತೋ ಅದರಲ್ಲಿ ಗ್ಲೋಬಲೈಸ್ ಅದಾಗೇ ಆಗಿದೆ. ಇಡೀ ರಾಜ್ಯದ ಶಿಕ್ಷಕರು ಎಲ್ಲರೂ ಗುಲ್ಬರ್ಗಾಕ್ಕೆ ಬರುತ್ತಾರೆ. ಅಲ್ಲಿ ಅಪ್ಲಿಕೇಶನ್ ಹಾಕಿ ಅಲ್ಲಿ ಸಲೆಕ್ಟ್ ಆಗುತ್ತಾರೆ. ಆ ಮೇಲೆ ಅಲ್ಲಿಂದ ಟ್ರಾನ್ಸ್‌ಫರ್ ಮಾಡಿಕೊಂಡು ಹೋಗಿಬಿಡುತ್ತಾರೆ. ಹೀಗಾಗಿ ಹಿಂದುಳಿದ ಪ್ರದೇಶ ನಮ್ಮದೇನಾಗಿದೆ ಅದು ಮತ್ತೆ ಹಿಂದುಳಿದ ಪ್ರದೇಶವಾಗೇ ಮುಂದುವರೆಯುತ್ತದೆ. ಮೆಡಿಕಲ್ ಎಜುಕೇಷನ್‌ನಲ್ಲಾಗಲಿ, ಇಂಜಿನಿಯರಿಂಗ್‌ನಲ್ಲಾಗಲೀ, ಪ್ರತಿಯೊಂದು ಕ್ಷೇತ್ರದಲ್ಲೂ ಮತ್ತು ಬೇರೆ ಡೆವಲಪ್‌ಮೆಂಟ್‌ನಲ್ಲಾಗಲೀ, ಈ ತರಹ ಆಗುವುದರಿಂದ 371ಕ್ಕೆ ತಿದ್ದುಪಡಿ ಮಾಡುವ ತನಕ ಅದರ ಅಭಿವೃದ್ಧಿ ಸಾಧ್ಯವಿಲ್ಲವೆಂದು ಸರ್ಕಾರದವರೇ ಹೇಳಬೇಕು. ಅದಕ್ಕೆ ಅವಶ್ಯಕತೆ ಇಲ್ಲ. ಆದರೂ ಕೂಡಾ ಹಾಗೆ ಬರುತ್ತದೆ. ಇವೊತ್ತು 371 ಅನುಚ್ಛೇದದಲ್ಲಿ ಸೇರಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಏನು ಡಿಫಿಕಲ್ಟಿ ಇದೆ. ನಮ್ಮ ಸರ್ಕಾರ ಒತ್ತಾಯ ಮಾಡಬೇಕು. ಇವೊತ್ತು ಪಾರ್ಲಿಮಂಟಿನಲ್ಲಿ ಬಿಲ್ ಇಟ್ಟು ಜಾರ್ಖಂಡ, ಉತ್ತರಾಂಚಲ, ಈ ತರಹ ಅನೇಕ ರಾಜ್ಯಗಳೇ ಆಗುತ್ತಿದೆ. ಆದರೆ ಕೇವಲ 371ರಲ್ಲಿ ನಮ್ಮದನ್ನು ಸೇರಿಸಿ ಕೆಲವು ಸವಲತ್ತುಗಳನ್ನು ಕೊಡಬೇಕೆಂದು ನಾವು ಕೇಳಿದರೆ ಅದಕ್ಕೆ ಇವೊತ್ತು ಕೇಂದ್ರ ಸರ್ಕಾರ ಒಪ್ಪುತ್ತಿಲ್ಲ. ನಾವು ಕೇಳಿದ್ದು ಹೀಗೆ ಅನ್‌ಅಫಿಶೀಲಿಯ್ ಆಗಿ ಕೇಳಿದ್ದೇವೆ. ಕೇಂದ್ರ ಸರ್ಕಾರ ಹೋಂ ಮಿನಿಸ್ಟರ್ ಇವೊತ್ತು ಹೇಳುತ್ತಿದ್ದಾರೆ. ಇಲ್ಲಾ, ಕರ್ನಾಟಕವೆಂದು ಕೊಟ್ಟರೆ ಆಮೇಲೆ ಬೇರೆ ರಾಜ್ಯಗಳವರೂ ಕೂಡ ಕೇಳಬಹುದು. ಬೇರೆ ಸ್ಟೇಟ್‌ಗಳವರೂ ಕೂಡ ಕೇಳಬಹುದುಎಂದು ಅವರದೇನೋ ವಿಚಾರವಿದೆ. ಬೇರೆ ರಾಜ್ಯಗಳದ್ದೂ ರೀಸನಬಲ್ ಡಿಮ್ಯಾಂಡ್ ಇತ್ತು ಎಂದರೆ ಕೊಡಬೇಕು ಎಲ್ಲಾ ಕಡೆಗೂ ಅದರಲ್ಲೇನೋ ತಪ್ಪಿಲ್ಲ. ಆದರೆ ಬೇರೆಯವರು ಕೇಳುತ್ತಾರೆ ಎಂದು ಅದರ ಸಲುವಾಗಿ ನಮಗೆ ಕೊಡುವುದಿಲ್ಲ ಎಂದರೆ ಏನರ್ಥ? ಆ ದೃಷ್ಟಿಯಿಂದ ನಾನು ಹೇಳುತ್ತೇನೆ. ಇವೊತ್ತು ನಮ್ಮ ಶಿವರಾಜ್ ಪಾಟೀಲ್ ಒಂದು ವೇಳೆ ಬ್ರಿಟಿಷ್ ಪ್ರಧಾನಮಂತ್ರಿಯಾಗಿ 1947ರಲ್ಲಿ ಇದ್ದಿದ್ದರೆ, ಇಲ್ಲಾ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕೊಡುವುದಿಲ್ಲಾ, ಏಕೆಂದರೆ ಬೇರೆ ದೇಶಗಳೆಲ್ಲಾ ಕೇಳುತ್ತಾರೆ ಎಂದು ಅನ್ನಬಹುದಾಗಿತ್ತು ಎಂದು ನನಗನ್ನಿಸುತ್ತದೆ.

ಅವರು ಖರೆ ಎಂದರೆ ಹೋಮ್ ಸೆಕ್ರೆಟರಿ ಆಗುವುದಕ್ಕೆ ಲಾಯಕ್ಕಾಗಿದ್ದಾರೆ. ಅವರು ಇವತ್ತು ದುರ್ದೈವದಿಂದ ಹೋಮ್ ಮಿನಿಸ್ಟರ್ ಆಗಿದ್ದಾರೆ. ಅಂತಹದನ್ನು ಕೇಳಿದ್ದರೆ ನಮ್ಮ ಸರ್ಕಾರದ ಮುಂದೆ ಶಕ್ತಿ ಇಲ್ಲ. ಇವರು ಕೇಳುತ್ತಿಲ್ಲ. ಮಿಸ್‌ಲೀಡ್ ಮಾಡುತ್ತಿದ್ದಾರೆ. ಆ ದೃಷ್ಟಿಯಿಂದ ಇದರ ಬಗ್ಗೆ ಸಮಗ್ರ ಚರ್ಚೆಯಾಗಬೇಕು. ಸುಮಾರು ಎಲ್ಲಾ ಶಾಸಕರು ಸಿಗ್ನೇಚರ್ ಮಾಡಿದ್ದಾರೆ.

ಅಧ್ಯಕ್ಷರು: ಇದನ್ನು ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇನೆ. ಅದಕ್ಕೆ ಕಾಲ ನಿಗದಿ ಮಾಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವೈಜನಾಥ್ ಪಾಟೀಲ್: ಯಾವಾಗ? ಇವತ್ತೆ ಕೊಡುತ್ತೀರ?

ಅಧ್ಯಕ್ಷರು: ಇವತ್ತು ಕೊಡುವುದಕ್ಕಾಗುವುದಿಲ್ಲ ಅದಕ್ಕೆ ಸಮಯ ಫಿಕ್ಸ್ ಮಾಡುತ್ತೇವೆ. ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಸೈನ್ ಹಾಕಿರುವವರಿಗೆ ಒಂದೊಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಇಲ್ಲ. ಮಾತನಾಡುವುದಕ್ಕೆ ಬೇರೆ ರೀತಿಯಲ್ಲಿ ಅವಕಾಶ ಮಾಡಿಕೊಡುತ್ತೇನೆ. ಇದಕ್ಕೆ ಕೇಳಿದ್ದಾರೆ, ನಿಮಯ 69ರ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಅಡ್ಜರ್ನ್‌ಮೆಂಟ್ ಮೋಷನ್ ತಂದಿರುವಂತಹ ಉದ್ದೇಶವೇ ಬೇರೆ.

ಅಧ್ಯಕ್ಷರು: ಆಯಿತು ಸ್ವಾಮಿ, ಅವರು ಹೇಳಿದ್ದನ್ನು ನಾನು ಕೇಳಿದೆ. ಅವರು ಹೇಳಿದ್ದನ್ನು ಮೇನ್ ಆಗಿ ಕೇಳಿದಾಗ ಮೇಲೆ ಅದಕ್ಕೆ ಡಿಸ್‌ಕಷನ್‌ಗೆ ಅವಕಾಶ ಕೊಟ್ಟ ಮೇಲೆI need not hear everybody

ಶ್ರೀ ಜೆ.ಸಿ. ಮಾಧುಸ್ವಾಮಿ: ವಿಷಯ ಹೇಳುವುದಕ್ಕೆ ಮೊದಲೇ ನಿಯಮ 69ಕ್ಕೆ ತೀರ್ಮಾನ ತೆಗೆದುಕೊಂಡಿದ್ದೀರಲ್ಲ.

ಅಧ್ಯಕ್ಷರು: ನಿಯಮ 69ರ ಅಡಿಯಲ್ಲಿ ಅವಕಾಶ ಇದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಿಯಮ 69ರ ಬದಲು ನಿಲುವಳಿ ಸೂಚನೆ ಮಾಡಿ, ಇದು ಬಹಳ ಪ್ರಾಮುಖ್ಯತೆ ಇದೆ.

ಅಧ್ಯಕ್ಷರು: ಆಯಿತು ನಾನು ರೂಲಿಂಗ್ ಕೊಟ್ಟಿದ್ದೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ಅದನ್ನೆ ಒಪ್ಪಿ, ತಾವು ನಿಲುವಳಿ ಸೂಚನೆಗೆ ಕೊಡಿ.

ಅಧ್ಯಕ್ಷರು: ಮಾಧುಸ್ವಾಮಿಯವರೆ, ಏನೆಂದು ನನಗೆ ಅರ್ಥವಾಗುತ್ತಿಲ್ಲ. ಈಗ ಏನಾಗಿದೆ? I need not hear everybody.

ಅವರು ಮುಖ್ಯವಾಗಿ ಕೇಳಿದ್ದಾರೆ. ಹಾಗೂ ಸಾಕಷ್ಟು ಸಬ್‌ಮಿಟ್ ಮಾಡಿದ್ದಾರೆ. ಅದಕ್ಕೆ ನಾನು ರೂಲ್ 69ರಲ್ಲಿ ಅವಕಾಶ ಮಾಡಿಕೊಡುತ್ತೇನೆಂದರೆ ನೀವೆಲ್ಲರೂ ಕೇಳಬೇಕೆಂದು ಹೇಳುತ್ತೀರಿ. ಹಾಗೆ ಮಾಡಿದರೆ ಈ ನಿಲುವಳಿ ಸೂಚನೆ ಒಂದು ದಿವಸ ತರುತ್ತೀರಿ. ನಿಲುವಳಿ ಸೂಚನೆಗೆ ಹೌಸ್‌ನಲ್ಲಿ ಪೂರ್ತಿ ದಿವಸ ಆಗಿಹೋಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ ಕ್ಷಮಿಸಬೇಕು.

ಅಧ್ಯಕ್ಷರು: ನೀವು ಸೀನಿಯರ್ ಮೆಂಬರ್, ನೀವು ನಮಗೆ ಗೈಡ್ ಮಾಡಬೇಕು. ನಿಯಮ 69ಕ್ಕೆ ಮಾಡಿದ್ದೇನೆ. ನೀವು ಈ ರೀತಿ ಮಾಡಿದರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಇದು ಆಗಲೇಬೇಕು. ಇದಕ್ಕೆ ರುಜುವು ಹಾಕಿಕೊಟ್ಟಿದ್ದೇವೆ.

ಅಧ್ಯಕ್ಷರು; ಎಲ್ಲರೂ ಹೇಳಿದ್ದನ್ನು ಹಿಯರ್ ಮಾಡಬೇಕೆಂದು ಇಲ್ಲ. ನಿಯಮ 69ಕ್ಕೆ ಮಾಡಿದ್ದೇವೆ. ಅವಕಾಶ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಈಗ ನಾವೇ ನಿಯಮ 69ಕ್ಕೆ ಕೊಡುತ್ತಿದ್ದೆವು. ಆದರೆ ಅದು ಬಹಳ ಪ್ರಾಮುಖ್ಯವಾದ ವಿಷಯ. ಆದ್ಯತೆ ಮೇಲೆ ಚರ್ಚೆಯಾಗಲಿ.

ಅಧ್ಯಕ್ಷರು: ಆದ್ಯತೆ ಮೇಲೆ ಮಾಡಿದ್ದೇನೆ. ನಿಯಮ 69ರಲ್ಲಿ ಅವಕಾಶ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅದು ಯಾವಾಗಲೂ ಬರುತ್ತದೆ. ಇವತ್ತು ಇದನ್ನು ಅರ್ಧಗಂಟೆಯಲ್ಲಿ ಮುಗಿಸಿಬಿಡಿ.

ಅಧ್ಯಕ್ಷರು: ಆಯಿತು ಕೊಡೋಣ, ಸಮಯ ಗೊತ್ತು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ ನಿಲುವಳೀ ಸೂಚನೆ ಆದರೆ ಒಳ್ಳೆಯ ಶಕ್ತಿ ಬರುತ್ತದೆ. ತಾವು ಪ್ರಧಾನಿ ಹಾಗೂ ಗೃಹ ಸಚಿವರನ್ನು ಭೇಟಿ ಮಾಡಿದಿರಿ, ಅದಕ್ಕೆ ಒಂದು ಶಕ್ತಿ ಬರಬೇಕಲ್ಲ, ಪ್ರಕಾಶ್‌ರವರೆ...

ಅಧ್ಯಕ್ಷರು: ಈಗ ಮನೋಹರ್ ಕಿನೇಕರ್ ಅವರು ತಾವು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು. ತಾವು ಇಂಗ್ಲೀಷ್‌ನಲ್ಲಿ ಮಾತನಾಡಬೇಕು. ಎಲ್ಲಾ ಸಾಮರಸ್ಯ ಬೇಕು. ಆದುದರಿಂದ ಕನ್ನಡ ಬಂದರೆ ಕನ್ನಡದಲ್ಲಿ ಮಾತನಾಡಿ, ಬರಲೇ ಇಲ್ಲ ಎಂದರೆ ಇಂಗ್ಲೀಷ್‌ನಲ್ಲಿ ಮಾತನಾಡಿ.